**ಸಾಕ್ಷಿಯನ್ನು ದಿನಾಂಕಃ 10.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ವಾದಿ ಪರ ಶ್ರೀ ಕೆ.ವಿ.ಪಿ, ವಕೀಲರಿಂದಃ**

ನಿಡಿ-13 ರಲ್ಲಿ ನನ್ನ ತಾತನ ಹೆಸರು ಮರಿನಂಜಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ತಾತನ ತಂದೆಯ ಹೆಸರನ್ನು ಸಿದ್ದ ಬಿನ್ ರಂಗಿಜೋಗಿ ಎಂದು ತೋರಿಸಿರುತ್ತೇನೆ ಎಂದರೆ ಸರಿ. 1993-94 ನೇ ಸಾಲಿನಲ್ಲಿ ನಮ್ಮ ಜಮೀನುಗಳಿಗೆ ಸಂಬಂಧಿಸಿದಂತೆ ಐ.ಎನ್.ಹೆಚ್.ಸಿ.ಆರ್ 12/1993-94 ರಂತೆ ಪೌತಿ ಬದಲಾವಣೆ ಮೂಲಕ ಖಾತಾ ವ್ಯವಹರಣೆಗಳು ನಡೆದಿರುತ್ತವೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ತಾತನ ತಂದೆಯ ಹೆಸರನ್ನು ಮರಿಸಿದ್ದಯ್ಯ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಮರಿಸಿದ್ದಯ್ಯರವರನ್ನು ಸಿದ್ದ ಎಂದು ಸಹ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಐ.ಎನ್.ಹೆಚ್.ಸಿ.ಆರ್ 12/1993-94 ರ ದಾಖಲೆಯಲ್ಲಿ ನಮ್ಮ ಕುಟುಂಬಕ್ಕೆ ಸರ್ವೆ ನಂ. 366/2 ಮತ್ತು 368/2 ರ ಜಮೀನುಗಳು ಮಾತ್ರ ಇದ್ದವು ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎರಡು ಸರ್ವೆ ನಂಬರುಗಳ ಆಸ್ತಿಗಳು ನಮ್ಮ ಕುಟುಂಬದಲ್ಲಿರುತ್ತವೆ ಎಂದರೆ ಸರಿ. ಸರ್ವೆ ನಂ. 366/2 ಮತ್ತು 368/2 ರ ಪಹಣಿ ಪತ್ರಿಕೆಗಳಲ್ಲಿ ನಾನು ಕೂಡ ಸ್ವಾಧೀನದಲ್ಲಿರುವುದನ್ನು ತೋರಿಸುತ್ತವೆ ಎಂದರೆ ಸರಿ.

ದಾವಾ ತಪಶೀಲು ಸ್ವತ್ತಿನ ಮೇಲೆ ಚಿನ್ನಂಬಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನನ್ನ ತಂದೆ 1993-94 ನೇ ಸಾಲಿನಲ್ಲಿ ಸಾಲ ಪಡೆದಿದ್ದರು. ನಾನಾಗಲಿ ಅಥವಾ ನಮ್ಮ ಕುಟುಂಬದವರಾಗಲಿ 1995-96 ನೇ ಸಾಲಿನಲ್ಲಿ ಈ ಮೇಲೆ ಹೇಳಿದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಯಾವುದೇ ಸಾಲ ಪಡೆದಿರುವುದಿಲ್ಲವೆಂದು ಸದರಿ ಬ್ಯಾಂಕ್ ನವರು ವರದಿ ನೀಡಿರುತ್ತಾರೆ ಎಂದರೆ ನಾವು ಸಾಲ ಪಡೆದಿರುತ್ತೇವೆ. ದಾವಾ ಸ್ವತ್ತನ್ನು ಲಪಟಾಯಿಸುವ

ಉದ್ದೇಶದಿಂದ ನನ್ನ ತಾತನ ತಂದೆಯ ಹೆಸರನ್ನು ಸಿದ್ದ ಬಿನ್ ರಂಗಿಜೋಗಿಯೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಸರ್ವೆ ನಂ. 366/2 ರ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾರೆಯೇ ಹೊರತು ದಾವಾ ಸ್ವತ್ತಿನ ಮೇಲೆ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**